## 2ನೇ ಅಪರ ಸಿವಿಲ್ ನ್ಯಾಯಾಲಯ ಮಾಲೂರು

## ಸಿ.ಸಿ.ಸಂಖ್ಯೆಃ 904/2014

| | | |
|---|---|---|
| ಹೆಸರು | ಶಿವಾನಂದರೆಡ್ಡಿ | ಚಾಸಾ-1 ಪ್ರಾಸಾ-1 |
| ತಂದೆ-ಗಂಡನ ಹೆಸರುಃ | ಕೃಷ್ಣರೆಡ್ಡಿ | ಸಾಕ್ಷಿಯನ್ನು ದಿ:4-12-2021 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 55 ವರ್ಷ | |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಹೆಚ್.ಹೊಸಕೋಟೆ | |

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ

ದಿಃ 18-11-13 ರಂದು ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ನಾನು ಕಾರಿನಲ್ಲಿ ಮಾಲೂರಿನಿಂದ ನಮ್ಮ ಗ್ರಾಮವಾದ ಹೆಚ್ ಹೊಸಕೋಟೆ ಗ್ರಾಮಕ್ಕೆ ಹೋಗುವಾಗ, ಸದರೀ ಊರಿನ ಗೇಟ್‌ನಲ್ಲಿ ಯಾರೋ 4 ಜನರು ಟಾಟಾ ಸುಮೋ ವಾಹನದಲ್ಲಿ ಬಂದು ನನ್ನನ್ನು ಅಡ್ಡಗಟ್ಟಿ, ನನ್ನನ್ನು ಹಿಂದಿನ ಸೀಟಿಗೆ ಎಳೆದು ಹಾಕಿ ಅವರು ಕಾರನ್ನು ಹೊಸೂರು ರಸ್ತೆಯ ಹತ್ತಿರ ಚಿಕ್ಕತಿರುಪತಿ ಕ್ರಾಸ್‌ನ ಬಳಿಯವರೆಗೂ ಕಾರನ್ನು ಚಲಾನೆ ಮಾಡಿಕೊಂಡು ಹೋಗಿರುತ್ತಾರೆ.

2. ನನ್ನ ಒಂದು ಉಂಗುರ, ಮೊಬೈಲ್, ವಾಚ್, ಎಟಿಎಂ ಕಾರ್ಡ್ ಮತ್ತು 2,500-00 ನಗದನ್ನು ನನ್ನ ಬಳಿಯಿಂದ ಕಿತ್ತುಕೊಂಡು ಚಾಕುವಿನಿಂದ ನನ್ನ ಎಡಕಾಲಿನ ತೊಡೆಯ ಮೇಲೆ ಚುಚ್ಚಿ, ಕಾರನ್ನು ಬಿಟ್ಟು ನನ್ನನ್ನು ಬಿಟ್ಟು ಕಾರಿನ ಕೀಯನ್ನು ತೆಗೆದುಕೊಂಡು ಟಾಟಾ ಸುಮೋವಾಹನದಲ್ಲಿ ಹೊಸೂರು ಕಡೆಗೆ ಹೋಗಿರುತ್ತಾರೆ.

3. ಆ ಸಮಯದಲ್ಲಿ ಚಾ-4 ಪ್ರದೀಪ್‌ರೆಡಿರವರು ಅಲ್ಲಿಗೆ ಬಂದಿರುತ್ತಾರೆ ಮತ್ತು ಮಂಗಪುರದ ಚಾ-5 ರಮೇಶ್‌ರವರು ಅಲ್ಲಿಗೆ ಬಂದು, ನನ್ನನ್ನು ಬೈಕಿನಲ್ಲಿ ಸೀತನಾಯಕನಹಳ್ಳಿಗೆ ಕರೆದುಕೊಂಡು ಹೋಗಿದ್ದು, ನಂತರ ಚಾ-6 ಅಮನುಲ್ಲಾರವರ ಮಗನ ಕಾರಿನಲ್ಲಿ ಮಾಲೂರಿನ ವಿನಾಯಕ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ.

4. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಅದೇ ದಿನ ಮಾಲೂರಿನ ಸರ್ಕಾರಿ ಆಸ್ಪತ್ರೆಗೆ ನನ್ನ ತಮ್ಮ ಮಂಜುನಾಥರವರು ಬೈಕ್‌ನಲ್ಲಿ ಕರೆದುಕೊಂಡು ಹೋಗಿರುತ್ತಾರೆ.

5. ಆಸ್ಪತ್ರೆಗೆ ಪೊಲೀಸನವರು ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಮಾರನೇ ದಿನ ನನ್ನನ್ನು ಪೊಲೀಸರು ಮಹಜರ್ ಮಾಡಲು ಆರೋಪಿತ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ಮಾಡಿಕೊಂಡಿರುತ್ತಾರೆ. ಸದರೀ ಮಹಜರ್ ಮಾಡುವಾಗ ವೆಂಕಟೇಶ, ಚಾಲಕ ವೆಂಕಟೇಶ್‌ರವರು ಸಹಿ ಮಾಡಿರುತ್ತಾರೆ. ಅಲ್ಲಿ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

6. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಹೇಳಿಕೆ ದೂರಾಗಿದ್ದು, ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದು ಮಹಜರ್ ಆಗಿದ್ದು, ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದಃ

ಆರೋಪಿತ ಘಟನೆಯ ದಿನ ನನ್ನನ್ನು 1 ರಿಂದ 4ನೇ ಆರೋಪಿಗಳು ಊರಿನಿಂದ 5 ಲಕ್ಷ ರೂ ಹಣ ತರಿಸುವಂತೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ನನಗೆ ಆರೋಪಿಗಳು ಚಾಕುವಿನಿಂದ ಚುಚ್ಚಿದಾಗ ನನ್ನ ಪ್ಯಾಂಟ್ ರಕ್ತವಾಗಿತ್ತು ಎಂದರೆ ಸರಿ.

2. 4 ಜನ ಆರೋಪಿಗಳಲ್ಲಿ ಒಬ್ಬರಿಗೆ 25-30 ವರ್ಷ, ಇನ್ನಿಬ್ಬರಿಗೆ 35-40 ವರ್ಷ, ಒಬ್ಬ ಚಿಕ್ಕ ವಯಸ್ಸಿನವರು ಚೆಕ್ಸ್ ಶರ್ಟ್ ಮತ್ತು ಪ್ಯಾಂಟ್, ಒಬ್ಬ ಜರ್ಕಿನ್, ಒಬ್ಬ ಕಪ್ಪು ಪ್ಯಾಂಟ್‌ನ್ನು ಧರಿಸಿದ್ದರು. ಸಾಧಾರಣ ಮೈಕಟ್ಟು ಗೋಧಿ ಬಣ್ಣ ಹೊಂದಿದ್ದರು. ಅವರುಗಳು ಕನ್ನಡ ಮತ್ತು ತೆಲುಗು ಭಾಷೆಯನ್ನು ಸಹ ಮಾತನಾಡುತ್ತಿದ್ದರು ಎಂದು ನನ್ನ ಹೇಳಿಕೆಯನ್ನು ತಿಳಿಸಿರುತ್ತೇನೆಂದರೆ ಸರಿ.

3. ಮಹಜರ್ ಮಾಡುವ ಕಾಲಕ್ಕೆ ನಾನು ನನ್ನ ರಕ್ತ ಕಲೆಯಾಗಿರುವ ಪ್ಯಾಂಟ್‌ನ್ನು ಪೋಲೀಸರಿಗೆ ನೀಡಿರುತ್ತೇನೆಂದರೆ ಸರಿ.

4. ಆರೋಪಿಯು ನ್ಯಾಯಾಲಯದ ಮುಂದಿರುವ ಚಾಕುವನ್ನು ಗುರುತಿಸಿರುತ್ತಾರೆ. ಸದರೀ ಚಾಕುವನ್ನು ಎಂಒ-1 ಎಂದು ಗುರುತಿಸಲಾಯಿತು.

5. 1ನೇ ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಿದ್ದು, ಆತನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳ ಮೇಲೆ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಅವರನ್ನು ನೋಡಿದರೆ ಗುರುತು ಹಿಡಿಯಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

6. ನಾನು ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಃ

ದಿಃ18-11-13 ರಂದು ನಾನು ಮಾಲೂರನ್ನು ಬಿಟ್ಟಾಗ ರಾತ್ರಿ 9 ಗಂಟೆ ಸಮಯಯಾಗಿತ್ತು. ಮಾಲೂರಿನಿಂದ ಹೆಚ್ ಹೊಸಕೋಟೆ ಗೇಟ್‌ಗೆ ಸುಮಾರು 5 ಕಿ.ಮೀಟರ್ ಆಗುತ್ತದೆ. ಸದರೀ ರಸ್ತೆಯಲ್ಲಿ ವಾಹನಗಳ ಸಂದಣಿ ಇರುತ್ತದೆ ಎಂದರೆ ಸರಿ.

2. ಆಗ ತುಂಬಾ ಕತ್ತಲು ಸಹ ಇತ್ತು. ಹೆಚ್ ಹೊಸಕೋಟೆ ಗೇಟ್‌ನಿಂದ ಚಿಕ್ಕತಿರುಪತಿ ಕ್ರಾಸ್ ಸುಮಾರು 12 ಕ್ಕಿಮೀಟರ್ ಆಗುತ್ತದೆ ಎಂದರೆ ಸರಿ. ಸದರೀ ಜಾಗದಲ್ಲಿಯೂ ಸಹ ವಾಹನಗಳ ಸಂದಣಿ ಮತ್ತು ಜನ ಸಂದಣಿ ಇರುತ್ತದೆ ಎಂದರೆ ಸರಿ. ಸದರೀ ಸ್ಥಳದಲ್ಲಿಯೂ ಸಹ ತುಂಬಾ ಕತ್ತಲೇ ಇತ್ತು.

3. ಚಿಕ್ಕತಿರುಪತಿ ಕ್ರಾಸ್‌ನ ಬಳಿ ಹೋಗುವಷ್ಟರಲ್ಲಿ 9-30 ಗಂಟೆ ಆಗಿತ್ತು.

4. ನನ್ನ ಕಾರಿನ ಲಾಕ್‌ನ್ನು ನಾನು ಒಪನ್ ಮಾಡಿದರೆ ಮಾತ್ರ ಹೊರಗಡೆಯಿಂದ ತೆಗೆಯಬಹುದು ಎಂದರೆ ಸರಿ.

5. ಚಾ-5 ರಮೇಶ್ ಎನ್ನುವವರು ನನ್ನನ್ನು ಗಾಡಿಯಲ್ಲಿ ಕರೆದುಕೊಂಡು ಬರಬೇಕಾದರೆ ನಾನು ಗಾಡಿಯಿಂದ ಲಕ್ಕೂರು ಗೇಟ್‌ನ ಬಿದ್ದಿರುತ್ತೇನೆಂದರೆ ಸರಿ. ಆಗ ನನಗೆ ರಕ್ತ ಗಾಯಗಳು ಆಗಿರುತ್ತದೆ ಎಂದರೆ ಸರಿ. ಆಗ ನನ್ನ ಪ್ಯಾಂಟ್ ಸಹ ಹರಿದಿರುತ್ತದೆ.

6. ನಾನು ವಿನಾಯಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಮಾತ್ರ ಪಡೆದಿರುತ್ತೇನೆ. ನಾನು ಸದರೀ ಆಸ್ಪತ್ರೆಗೆ ಬರುವಷ್ಟರಲ್ಲಿ ಸುಮಾರು 10 ಗಂಟೆ ಆಗಿತ್ತು. ಡಾಃ ಪ್ರಭುರವರು ನನಗೆ ಪ್ರಥಮ ಚಿಕಿತ್ಸೆ ನೀಡಿರುತ್ತಾರೆ.

7. ನಂತರ ನನ್ನನ್ನು ಮಾಲೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವಷ್ಟರಲ್ಲಿ 11 ಗಂಟೆ ಸಮಯ ಆಗಿತ್ತು. ನಾನು ಸರ್ಕಾರಿ ಅಸ್ಪತ್ರೆಯಲ್ಲಿ 4 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ.

8. ಪೊಲೀಸನವರು ನನ್ನ ಹೇಳಿಕೆಯನ್ನು ವಿನಾಯಕ ಆಸ್ಪತ್ರೆಯಲ್ಲಿಯೂ ಸಹ ಪಡೆದಿರುತ್ತಾರೆ. ಆಗ ಸಮಯ 10-30 ಆಗಿತ್ತು. ಸರ್ಕಾರಿ ಆಸ್ಪತ್ರೆಯಲ್ಲಿಯೂ ಸಹ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆಗ ಸಮಯ ಸುಮಾರು 11 ಗಂಟೆ ಆಗಿತ್ತು.

9. ನಿಪಿ-1 ನ್ನು ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ.

10. ಮಹಜರ್ ಕ್ರಮವನ್ನು ಬೆಳಗ್ಗೆ 9 ಗಂಟೆಗೆ ಹೆಚ್ ಹೊಸಕೋಟೆ ಗೇಟ್‌ನ ಬಳಿ ಮಾಡಿರುತ್ತಾರೆ. ಅಲ್ಲಿ ಒಂದು ಅರ್ಧ ಗಂಟೆ ಸಮಯ ಕಳೆದಿರುತ್ತೇವೆ.

11. ಚಿಕ್ಕತಿರುಪತಿ ಕ್ರಾಸ್‌ನ ಬಳಿ ಹೋಗುವಷ್ಟರಲ್ಲಿ 11 ಗಂಟೆ ಸಮಯ ಆಗಿತ್ತು. ಅಲ್ಲಿ ಒಂದು ಅರ್ಧ ಗಂಟೆ ಸಮಯ ಕಳೆದಿರುತ್ತೇವೆ.

12. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸನವರು ಸಹ ಸದರೀ ವಿಚಾರವನ್ನು ಓದಿ ಹೇಳಿರುವುದಿಲ್ಲ.

13. ನ್ಯಾಯಾಲಯದ ಮುಂದಿರುವ ಎಂ.ಒ-1 ರ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ ಮತ್ತು ಯಾವ ಚಾಕುವಿನಿಂದ ನನಗೆ ಹಲ್ಲೆ ಮಾಡಿರುತ್ತಾರೆಂದು ನನಗೆ ಕತ್ತಲಿನಲ್ಲಿ ತಿಳಿದಿರುವುದಿಲ್ಲ.

14. ಕಾರಿನಲ್ಲಿದ್ದ ಆರೋಪಿಗಳ ಮುಖಗಳು ಕತ್ತಲಿನಲ್ಲಿ ಕಾಣುತ್ತಿಲ್ಲ ಎಂದರೆ ಸರಿ, ಯಾರ್ಯಾರು ಏನು ಮಾಡಿದರು ಎಂದೂ ನನಗೆ ತಿಳಿದಿರುವುದಿಲ್ಲ.

15. ನನ್ನ ರಕ್ತದ ಕಲೆಯಾಗಿರುವ ಪ್ಯಾಂಟ್ ಎಂದು ಹೇಳಲಾದ ವಸ್ತು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

16. ನನಗೆ ಆರೋಪಿಗಳ ಮುಖಚಹರೆಗಳನ್ನು ಹೇಳಲು ಸಾದ್ಯವಿಲ್ಲ ಎಂದರೆ ಸರಿ.

17. ನಾನು ಈ ಪ್ರಕರಣದ ಬಗ್ಗೆ ಬೇರೆ ಎಲ್ಲಿಯೂ ಸಹ ಹೇಳಿಕೆ ನೀಡಿಲ್ಲ ಎಂದರೆ ಸರಿ.

18. ದಿಃ18-11-13 ರಂದು ನನ್ನನ್ನು ಯಾರು ಅಡ್ಡಗಟ್ಟಿಲ್ಲ, ನನ್ನಿಂದ ಯಾವುದೇ ವಸ್ತುಗಳನ್ನು ಸಹ ಕಿತ್ತುಕೊಂಡಿಲ್ಲ ಎಂದರೆ ಸರಿಯಲ್ಲ.

19. ನಾನು ಮೇಲೆ ಹೇಳಿದಂತೆ ಗಾಡಿಯಲ್ಲಿ ಬಿದ್ದಾಗ ನನ್ನ ವಸ್ತುಗಳನ್ನು ಕಳೆದುಕೊಂಡು, ನಾನು ಪೊಲೀಸನವರು ದಾಖಲಿಸಿರುವ ಸುಳ್ಳು ಪ್ರಕರಣಕ್ಕೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

20. ನನ್ನಿಂದ ಆರೋಪಿಗಳು ಕಸಿದುಕೊಂಡಿರುತ್ತಾರೆಂದು ಹೇಳಲಾದ ವಸ್ತುಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ.

21. 1ನೇ ಆರೋಪಿಯನ್ನು ನಾನು ಈ ದಿನವೇ ವಿಸಿಯಲ್ಲಿ ನೋಡುತ್ತಿರುವುದು, ಈ ಮೊದಲು ಎಲ್ಲಿಯೂ ನೋಡಿಲ್ಲ ಎಂದರೆ ಸಾಕ್ಷಿಯು ಹಲಸೂರು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆಂದು ನುಡಿಯುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿದೆ.

ಓ ಹೇ ಕೇ ಸರಿ ಇದೆ,

C/c 2ನೇ ಅಪರ ಸಿವಿಲ್ ನ್ಯಾಯಾಧೀಶರು

ಮಾಲೂರು.

2ನೇ ಅಪರ ಸಿವಿಲ್ ನ್ಯಾಯಾಲಯ ಮಾಲೂರು

ಸಿ.ಸಿ.ಸಂಖ್ಯೆಃ 168/2013

| | | |
|---|---|---|
| ಹೆಸರು | ಆರ.ಸುರೇಶ್ | ಚಾಸಾ-8 ಪ್ರಾಸಾ-8 |
| ತಂದೆ-ಗಂಡನ ಹೆಸರುಃ | ಲೇಟ್ ರಾಮಯ್ಯ | ಸಾಕ್ಷಿಯನ್ನು ದಿ:2-12-2020 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 51 ವರ್ಷ | |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಲಕ್ಕೂರು ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ

ಚಾಸಾ-1 ರವರು ನನಗೆ ಪರಿಚಯವಿರುತ್ತಾರೆ. ದಿಃ 1-9-12 ರಂದು ಮಾಲೂರು ಎಸ್‌ಬಿಎಂನ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದು, ಎಟಿಎಂನಲ್ಲಿ ಎಟಿಎಂ ಕಾರ್ಡ್‌ನ್ನು ಹಾಕಲು ಪ್ರಯತ್ನಿಸಿದಾಗ ಆ ಸಮಯದಲ್ಲಿ ಯಾರೋ ಅಪರಿಚತರು ನನ್ನ ಎಟಿಎಂ ಕಾರ್ಡ್‌ನ್ನು ಪಡೆದು ಹಣ ಡ್ರಾ ಮಾಡಿರುವುದಾಗಿ ತಿಳಿಸಿದರು.

2. ನಾನು ಪಿನ್ ನಂಬರ್ ಒತ್ತಿದೆ. ಅಪರಿಚಿತರು ಇಲ್ಲಿ ಹಣ ಬರುತ್ತಿಲ್ಲವೆಂದು ಹೇಳಿ, ಪಕ್ಕದಲ್ಲಿ ಪ್ರಯತ್ನಿಸಿ ಎಂದು ಹೇಳಿ ಕಳುಹಿಸಿ, ನನ್ನಿಂದ 10 ಸಾವಿರ ರೂಗಳನ್ನು ಲಪಾಟಾಯಿಸಿ ಹೋಗಿರುತ್ತಾರೆಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ 1 ರಿಂದ 3ನೇಆರೋಪಿಗಳ ಪರ ವಕೀಲರಿಂದ ಃ

ನನಗೆ ಆರೋಪಿತ ಘಟನೆಯ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ. ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿಗಳನ್ನು ನಾನು ನೋಡಿರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿದೆ.

ಓ ಹೇ ಕೇ ಸರಿ ಇದೆ,

C/c 2ನೇ ಅಪರ ಸಿವಿಲ್ ನ್ಯಾಯಾಧೀಶರು

ಮಾಲೂರು.

# 2ನೇ ಅಪರ ಸಿವಿಲ್ ನ್ಯಾಯಾಲಯ ಮಾಲೂರು

## ಸಿ.ಸಿ.ಸಂಖ್ಯೆಃ 168/2013

| | | |
|---|---|---|
| ಹೆಸರು | ಕೃಷ್ಣಪ್ಪ | ಚಾಸಾ-9 ಪ್ರಾಸಾ-9 |
| ತಂದೆ-ಗಂಡನ ಹೆಸರುಃ | ಲೇಟ್ ತಿಮ್ಮಯ್ಯ | ಸಾಕ್ಷಿಯನ್ನು ದಿ:2-12-2020 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 56 ವರ್ಷ | |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಲಕ್ಕೂರು ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ

ಚಾಸಾ-1 ರವರು ನನಗೆ ಪರಿಚಯವಿರುತ್ತಾರೆ. ದಿಃ 1-9-12 ರಂದು ಮಾಲೂರು ಎಸ್‌ಬಿಎಂನ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದು, ಎಟಿಎಂನಲ್ಲಿ ಎಟಿಎಂ ಕಾರ್ಡ್‌ನ್ನು ಹಾಕಲು ಪ್ರಯತ್ನಿಸಿದಾಗ ಆ ಸಮಯದಲ್ಲಿ ಯಾರೋ ಅಪರಿಚತರು ನನ್ನ ಎಟಿಎಂ ಕಾರ್ಡ್‌ನ್ನು ಪಡೆದು ಹಣ ಡ್ರಾ ಮಾಡಿರುವುದಾಗಿ ತಿಳಿಸಿದರು.

2. ನಾನು ಪಿನ್ ನಂಬರ್ ಒತ್ತಿದೆ. ಅಪರಿಚಿತರು ಇಲ್ಲಿ ಹಣ ಬರುತ್ತಿಲ್ಲವೆಂದು ಹೇಳಿ, ಪಕ್ಕದಲ್ಲಿ ಪ್ರಯತ್ನಿಸಿ ಎಂದು ಹೇಳಿ ಕಳುಹಿಸಿ, ನನ್ನಿಂದ 10 ಸಾವಿರ ರೂಗಳನ್ನು ಲಪಾಟಾಯಿಸಿ ಹೋಗಿರುತ್ತಾರೆಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ 1 ರಿಂದ 3ನೇಆರೋಪಿಗಳ ಪರ ವಕೀಲರಿಂದ ಃ

ನನಗೆ ಆರೋಪಿತ ಘಟನೆಯ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ. ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿಗಳನ್ನು ನಾನು ನೋಡಿರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿದೆ.

ಓ ಹೇ ಕೇ ಸರಿ ಇದೆ,

C/c 2ನೇ ಅಪರ ಸಿವಿಲ್ ನ್ಯಾಯಾಧೀಶರು
ಮಾಲೂರು.